# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಸುರೇಶ ರಾಮ ಪಟಗಾರ, ಅಧ್ಯಕ್ಷರು, ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಅಪರ ನಿಬಂಧಕರು, ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ ಕಂಪ್ಲೇಂಟ್/ ಉಪಲೋಕ್/ಬಿಜಿಎಂ-342/2011/ಎಆರ್‌ಇ-6, ದಿನಾಂಕ 13.02.2015.
2. ವಿಚಾರಣಾ ತಿಳುವಳಿಕೆ ಪತ್ರ, ದಿನಾಂಕ: 15.04.2015.
3. ಶ್ರೀ ಸುರೇಶ ರಾಮ ಪಟಗಾರ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ದಿನಾಂಕ 06.05.2015 ರಂದು ನಡೆದ ವಿಚಾರಣೆಯಲ್ಲಿ ನೀಡಿರುವ ಲಿಖಿತ ಹೇಳಿಕೆ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲಾ ಪಂಚಾಯತಿ ಇವರ ಪತ್ರ ಸಂಖ್ಯೆ ಜಿಪಂಅ/ಗ್ರಾಪಂ/ನವಿಲುಗೋಣ/ಲೋಕಾಯುಕ್ತ/2015-16, ದಿನಾಂಕ 24.07.2015.
5. ಶ್ರೀ ಸುರೇಶ ರಾಮ ಪಟಗಾರ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ದಿನಾಂಕ 24.09.2016 ರಂದು ನಡೆದ ವಿಚಾರಣೆಯಲ್ಲಿ ನೀಡಿರುವ ಲಿಖಿತ ಹೇಳಿಕೆ.
6. ಶ್ರೀ ಸುರೇಶ ರಾಮ ಪಟಗಾರ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ದಿನಾಂಕ 28.10.2016 ರಂದು ನಡೆದ ವಿಚಾರಣೆಯಲ್ಲಿ ನೀಡಿರುವ ಲಿಖಿತ ಹೇಳಿಕೆ.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಲಗತ್ತಿಸಿ ಕಳುಹಿಸಿರುವ ದಿನಾಂಕ: 13.02.2015ರ ಅಪರ ನಿಬಂಧಕರು, ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ಪತ್ರದ ಸಂಗಡ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(3) ರ ಅಡಿ ಸಲ್ಲಿಸಿರುವ ದಿನಾಂಕ 11.02.2015 ರ ವರದಿಯಲ್ಲಿ ಶ್ರೀ ರವಿ ನಾಗಪ್ಪ ನಾಯಕ, ನವಿಲುಗೋಣ ಗ್ರಾಮ ಇವರು ಶ್ರೀ ಸುರೇಶ ರಾಮ ಪಟಗಾರ, ಹಿಂದಿನ ಅಧ್ಯಕ್ಷರು, ಹಾಲಿ ಸದಸ್ಯರು ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ದೂರು ದಾಖಲಿಸಿ 2006 ರಿಂದ 2011 ರ ಅವಧಿಯಲ್ಲಿ ನಿರ್ಮಲ ಗ್ರಾಮ, ಇಂದಿರಾ ಆವಾಸ ಯೋಜನೆ ಹಾಗೂ ನರೇಗಾ ಯೋಜನೆಯಡಿಲ್ಲಿ ಹಣ ದುರುಪಯೋಗ ಮಾಡಿದ್ದಾರೆ ಎಂದು ಸಲ್ಲಿಸಿದ ದೂರಿನನ್ವಯ ಕೈಗೊಂಡ ತನಿಖಾ ವರದಿಯಲ್ಲಿ ಶ್ರೀ ಸುರೇಶ ರಾಮ ಪಟಗಾರ ಕರ್ತವ್ಯಲೋಪವೆಸಗಿರುವುದರಿಂದ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಶ್ರೀ ಸುರೇಶ ರಾಮ ಪಟಗಾರ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು ಇವರಿಗೆ ವಿಚಾರಣಾ ತಿಳುವಳಿಕೆ ಪತ್ರ ಜಾರಿಗೊಳಿಸಲಾಗಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಸದರಿಯವರು ಲಿಖಿತ ಹೇಳಿಕೆ ನೀಡಿ ತನ್ನ ಅವಧಿಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಗ್ರಾಮ ಪಂಚಾಯತಿ ವಲಯದಲ್ಲಿ ಸುಲಭ ಶೌಚಾಲಯ ನಿರ್ಮಿಸಿಕೊಂಡ ಬಿಪಿಎಲ್ ಫಲಾನುಭವಿಗಳಿಗೆ ಶೌಚಾಲಯ ನಿರ್ಮಿಸಿಕೊಂಡಿರುವುದನ್ನು ಪರಿಶೀಲಿಸಿ ಸುಲಭ ಶೌಚಾಲಯದ ಮಾರ್ಗದರ್ಶಿ ಸೂಚಿಯಂತೆ ಹಾಗೂ ಕಾರ್ಯದರ್ಶಿಯವರ ಮಾರ್ಗದರ್ಶನದಂತೆ ವೈಯಕ್ತಿಕ ಫಲಾನುಭವಿಗಳಿಗೆ ಅಧ್ಯಕ್ಷರ ಹಾಗೂ ಕಾರ್ಯದರ್ಶಿಯವರ ಜಂಟಿ ಸಹಿ ಹೊಂದಿರುವ ಚೆಕ್ ಮೂಲಕವೇ ಹಣ ಸಂದಾಯ ಮಾಡಿದ್ದು, ಯಾವುದೇ ಅವ್ಯವಹಾರ ಎಸಗಿಲ್ಲ. ಚೆಕ್ ಪಡೆದ

ಕುರಿತು ಫಲಾನಭವಿ ಸಹಿ ಸಹ ಪಡೆದಿರುತ್ತೇವೆ. ಸದರಿ ನಿರ್ಮಿಸಿಕೊಂಡ ಶೌಚಾಲಯಗಳನ್ನು ಹಾಳುಗೆಡವಿದರಲ್ಲಿ ಪ್ರಯೋಜನ ಪಡೆದ ಫಲಾನುಭಿವಿಗಳೆ ಜವಾಬ್ದಾರರಾಗಿರುವುದಲ್ಲದೇ ವೈಯಕ್ತಿಕವಾಗಿ ತಾನು ಜವಾಬ್ದಾರನಾಗಿರುವುದಿಲ್ಲ ಎಂದು ತಿಳಿಸಿದ್ದಾರೆ.

ಇಂದಿರಾ ಆವಾಜ್ ಯೋಜನೆ ಫಲಾನುಭಿವಗಳು ತಮ್ಮ ಗ್ರಾಮ ಪಂಚಾಯತಿಯ ರಹವಾಸಿಗಳೇ ಆಗಿದ್ದು ಬಡ ಕುಟುಂಬದವರಾಗಿದ್ದು, ಸದರಿಯವರು ವಿನಂತಿ ಅರ್ಜಿಯನ್ನು ಪರಿಶೀಲಿಸಿ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳಾಗಿದ್ದು, ಕಾರ್ಯದರ್ಶಿಯವರ ಸಲಹೆಯಂತೆ ಅರ್ಹರಿರುವ ಕುರಿತು ಸಂಬಂಧಿಸಿದ ಅಧಿಕಾರಿಗಳಿಂದ ಮಂಜೂರಿ ಪಡೆದು ಮನೆ ನಿರ್ಮಾಣದ ಕುರಿತು ಸದರಿಯವರಿಂದ ಕರಾರು ಪತ್ರ ನೋಂದಣಿ ಮಾಡಿಸಿ ಮನೆ ನಿರ್ಮಾಣದ ಹಂತ ಹಂತದ ಫೋಟೋಗಳನ್ನು ಕಾರ್ಯದರ್ಶಿಯವರು ನಿಂತು ತೆಗೆದು ಫಲಾನುಭವಿಯ ಹೆಸರಿನಲ್ಲೇ ಚೆಕ್ ನೀಡಿ ಹಣ ಸಂದಾಯ ಮಾಡಿದ್ದು, ಯಾವುದೇ ಹಣದ ದುರುಪಯೋಗವಾಗಿಲ್ಲ. ಸದರಿಯವರು ನಿರ್ಮಾಣದ ನಂತರದಲ್ಲಿ ಬೇರೆ ಉದ್ದೇಶಕ್ಕೆ ಬಳಸಿದ್ದಲ್ಲಿ ಸದರಿ ಫಲಾನುಭವಿಯೇ ಜವಾಬ್ದಾರನಾಗಿರುತ್ತಾನೆ ಎಂದು ತಿಳಿಸಿದ್ದಾರೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿಯಮಾವಳಿಗಳಂತೆ ಕೆಲಸ ನಿರ್ವಹಿಸಿದ್ದು, ಕೆಲಸ ಮಾಡಿದ ಕೂಲಿಕಾರರಿಗೆ ನಿಯಮಾವಳಿಗಳಂತೆ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದು, ಸದರಿ ಹಣವನ್ನು ಅವರೇ ಪಡೆದಿಕೊಂಡಿರುತ್ತಾರೆ. 2007–08ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೋಂದಾಯಿಸಿಕೊಂಡ ಕುಟುಂಬಕ್ಕೆ ಒಂದೇ ಬ್ಯಾಂಕ್ ಖಾತೆ ಇದ್ದು ಸದರಿ ಕುಟುಂಬದಲ್ಲಿ ಕೆಲಸ ನಿರ್ವಹಿಸಿದ ಸದಸ್ಯರ ಕೂಲಿ ಮೊತ್ತವನ್ನು ಬ್ಯಾಂಕ್ ಖಾತೆ ಹೊಂದಿದ ಕುಟುಂಬದ ಯಜಮಾನನ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದು, ಸದರಿಯವರು ಕೂಲಿ ನಿರ್ವಹಿಸಿದ ಕುರಿತು ಎನ್.ಎಮ್.ಆರ್. ನಲ್ಲಿ ದಾಖಲೆ ಇದೆ. ಅಲ್ಲದೆ ಕೆಲಸ ನಿರ್ವಹಿಸಿದ ಕುರಿತು ಎನ್.ಎಮ್.ಆರ್. ನಲ್ಲಿ ಸಹಿ ಸಹ ಇರುತ್ತದೆ. ಆದ್ದರಿಂದ ತನ್ನ ಮೇಲೆ ಇರುವ ಆರೋಪವನ್ನು ಕೈಬಿಡುವಂತೆ ವಿನಂತಿಸಿಕೊಂಡಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ ಇವರು ತಮ್ಮ ಪತ್ರದಲ್ಲಿ ಸದರಿ ಪ್ರಕರಣದಲ್ಲಿ ಶ್ರೀ ಸುರೇಶ ರಾಮ ಪಟಗಾರ, ಅಧ್ಯಕ್ಷರು, ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು ಇವರಿಂದ ಯಾವುದೇ ಮೊತ್ತ ವಸೂಲಿ ಮಾಡುವ ಕುರಿತು 2005–06 ರಿಂದ 2010–11 ರ ವರೆಗಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿ ತಿಳಿಸಿಲ್ಲವೆಂದು ಹಾಗೂ ಸದರಿಯವರಿಗೆ ಸಂಬಂಧಿಸಿದ ಯಾವುದೇ ಮೊತ್ತವು ಆಕ್ಷೇಪಣೆಯಲ್ಲಿಲ್ಲವೆಂದು ಕಾರ್ಯನಿರ್ವಾಹಕ ಅಧಿಕಾರಿಗಳು, ಹೊನ್ನಾವರ ತಾಲ್ಲೂಕು ಇವರು ವರದಿ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ಮತ್ತು (6) ರಲ್ಲಿ ಶ್ರೀ ಸುರೇಶ ರಾಮ ಪಟಗಾರ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಇವರ ನ್ಯಾಯಾಲಯದಲ್ಲಿ ನಡೆದ ಮೌಖಿಕ ವಿಚಾರಣೆಗೆ ಹಾಜರಾಗಿದ್ದು, ಮೇಲೆ ಓದಲಾದ (3) ರಂತೆ ಲಿಖಿತ ಹೇಳಿಕೆ ಸಲ್ಲಿಸಿದ್ದಾರೆ.

ದಾಖಲೆಗಳನ್ನು ಪರಿಶೀಲಿಸಲಾಗಿ

1. 2006 ರಿಂದ 2010ರವರೆಗೆ ಶೇ. 40% ರಷ್ಟು ಫಲಾನುಭವಿಗಳು ಶೌಚಾಲಯ ನಿರ್ಮಾಣ ಮಾಡಿಕೊಳ್ಳದೇ ಇದ್ದರೂ, ಪ್ರೋತ್ಸಾಹ ಧನ ನೀಡಲಾಗಿದೆ.
2. 1)ಶ್ರೀಮತಿ. ಯಶೋಧಾ ಸುಬ್ರಾಯ ಭಂಡಾರಿ, 2) ಶ್ರೀಮತಿ ಶಾರದಾ ಗೋವಿಂದ ನಾಯ್ಕ, 3) ಶ್ರೀಮತಿ ಮೋಹಿನಿ ಅರುಣ ನಾಯ್ಕ, 4) ಶ್ರೀಮತಿ ಮಹಾಲಕ್ಷ್ಮೀ ಸಬ್ರಾಯ ಹೆಗಡೆ, 5)ಶ್ರೀಮತಿ ದಾನಕೆ ಮಂಜುನಾಥ ಭಟ್, 6) ಶ್ರೀಮತಿ ಉಮಾ ಪರಮೇಶ್ವರ ನಾಯ್ಕ, 7)ಶ್ರೀಮತಿ ಆಶಾ ನಾಗೇಶ ದೇಶಭಂಡಾರಿ, ಹಾಗೂ 8) ಶ್ರೀಮತಿ ಜ್ಯೋತಿ ಉಮೇಶ್ ಹೆಗಡೆ ಇವರುಗಳಿಗೆ ವಾಸಕ್ಕೆ ಮನೆಗಳಿದ್ದ ಕಾರಣ ಇವರು ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಫಲಾನಭವಿಗಳಾಗಿಲು ಅರ್ಹತೆ ಇರದೇ ಇದ್ದರೂ, ಯೋಜನೆಯ ಲಾಭವನ್ನು ಅರ್ಹ ಫಲಾನುಭವಿಗಳಿಗೆ ನೀಡದೇ, ಅರ್ಹತೆ ಇಲ್ಲದೆ ಇದ್ದವರಿಗೆ ದನದ ಕೊಟ್ಟಿಗೆ, ಸ್ಟೋರ್ ರೂಮು ಮತ್ತು ಇತರೆ ಉಪಯೋಗದ ಕಟ್ಟಡ ನಿರ್ಮಿಸಿದ ಅವರುಗಳಿಗೆ ಯೋಜನೆಯ ಅಡಿಯಲ್ಲಿ ಹಣ ಮಂಜೂರಿ ಮಾಡಿ, ಇಂದಿರಾ ಆವಾಜ್ ಯೋಜನೆಯ ಮೂಲ ಉದ್ದೇಶ ವಿಫಲವಾಗಿದೆ
3. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 1)ಶ್ರೀ ಸಂತೋಷ ವೆಂಕಟರಮಣ ಭಟ್, 2) ಶ್ರೀಮತಿ ಸವಿತಾ ಹನಮಂತ ಮುಕ್ರಿ 3) ಶ್ರೀ ಹನಮಂತ ನಾಗು ಮುಕ್ರಿ, 4) ಷಣ್ಮುಗ ಮಂಜುಗೌಡ,

5) ಶ್ರೀ ಮಂಜುಗೌಡ ಇವರುಗಳು ಕೆಲಸ ಮಾಡದೇ ಇದ್ದರೂ ಅವರ ಹೆಸರಿನ ಬ್ಯಾಂಕ್ ಖಾತೆಗಳಲ್ಲಿ ಪಂಚಾಯತಿಯಿಂದ ಕೂಲಿ ಹಣ ಜಮಾ ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಶ್ರೀ ಸುರೇಶ ರಾಮ ಪಟಗಾರ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಕರ್ತವ್ಯಲೋಪವೆಸಗಿರುವುದು ಕಂಡು ಬಂದಿರುವುದರಿಂದ ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಂತೆ ನವಿಲುಗೋಣ ಗ್ರಾಮ ಪಂಚಾಯತಿ ಸದಸ್ಯತ್ವದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/29/ಗ್ರಾಪಂಅ/2015 ಬೆಂಗಳೂರು, ದಿನಾಂಕ:20.03.2017.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಸುರೇಶ ರಾಮ ಪಟಗಾರ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ನವಿಲುಗೋಣ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಿ ಆದೇಶಿಸಿದೆ.

**(ಮಾನ್ಯ ಪ್ರಧಾನ ಕಾರ್ಯದರ್ಶಿಯವರಿಂದ ಅನುಮೋದಿತ)**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಟಿ.ವಿ.ಅರುಣ್‌ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಪ್ರತಿಗಳು:</u>**

1) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
2) ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉತ್ತರ ಕನ್ನಡ ಜಿಲ್ಲೆ,
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
5) ಶ್ರೀ ಸುರೇಶ ರಾಮ ಪಟಗಾರ, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ
6) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನವಿಲುಗೋಣ ಗ್ರಾಮ ಪಂಚಾಯತಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
7) ಗಣಕ ಕೋಶ – ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.